# A

**16618** **120 MINUTES**

1. 'ನಮ್ಮ ಊರಿನ ರಸಿಕರು' ಇದು ಯಾರ ಕೃತಿ.
   - A) ಗೊರೂರು ರಾಮಸ್ವಾಮಿ ಅಯ್ಯಂಗಾರ್
   - B) ಎನ್.ಪ್ರಹ್ಲಾದರಾವ್
   - C) ಎ.ಎನ್.ಮೂರ್ತಿರಾವ್
   - D) ರಾಘವೇಂದ್ರ ಕುಲಕರ್ಣಿ

2. 'ಗಿಳಿವಿಂಡು' ಈ ಕೃತಿಯ ಕರ್ತೃ.
   - A) ಕಡಂಗೋಡ್ಲು ಶಂಕರಭಟ್ಟ
   - B) ಗೋವಿಂದ ಪೈ
   - C) ಜಂಬಣ್ಣ ಅಮರಚಿಂತ
   - D) ಪಂಜೆ ಮಂಗೇಶರಾವ್

3. ಇವುಗಳಲ್ಲಿ ಬಿ.ಪುಟ್ಟಸ್ವಾಮಯ್ಯ ಅವರ ಕೃತಿ ಯಾವುದು?
   - A) ಕ್ರಾಂತಿ ಕಲ್ಯಾಣ
   - B) ಮಹಾಚೈತ್ರ
   - C) ಸಿರಿಸಂಪಿಗೆ
   - D) ತಲೆದಂಡ

4. 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯನ್ನು ಬರೆದವರು ಯಾರು?
   - A) ಯಶವಂತ ಚಿತ್ತಾಲ
   - B) ವ್ಯಾಸರಾಯ ಬಲ್ಲಾಳ
   - C) ಶ್ರೀ ಕೃಷ್ಣ ಆಲನಹಳ್ಳಿ
   - D) ಶಂಕರ ಮೊಕಾಶಿ ಪುಣೇಕರ

5. 'ಅಕ್ಷರ ಹೊಸ ಕಾವ್ಯ' ಕೃತಿಯ ಸಂಪಾದಕರು
   - A) ಪಿ.ಲಂಕೇಶ್
   - B) ಸುಮತೀಂದ್ರ ನಾಡಿಗ
   - C) ಕೆ.ವಿ.ಅಕ್ಷರ
   - D) ಓ.ಎಲ್.ನಾಗಭೂಷಣಸ್ವಾಮಿ

6. ಇದು ಜಿ.ಎಸ್.ಆಮೂರರ ವಿಮರ್ಶಾ ಕೃತಿ.
   - A) ಉರಿಯನಾಲಗೆ
   - B) ಹೊಸತು–ಹೊಸತು
   - C) ಭುವನದಭಾಗ್ಯ
   - D) ಶೂನ್ಯ ಸಂಪಾದನೆಯ ಪರಾಮರ್ಶೆ

7. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿ.

A) ವಿ.ಕೃ.ಗೋಕಾಕ್– ಅರಲು–ಬರಲು

B) ಕೆ.ಎಸ್.ನರಸಿಂಹಸ್ವಾಮಿ– ಜೀವಧ್ವನಿ

C) ವಿ.ಸೀತಾರಾಮಯ್ಯ– ಅರಳು ಮರಳು

D) ಎಂ.ಗೋಪಾಲಕೃಷ್ಣ ಅಡಿಗ– ವರ್ಧಮಾನ

8. 'ಅಗಮೆಮ್ನೋನ್' ನಾಟಕದ ಕರ್ತೃ.

A) ಇಸ್ಕಿಲಸ್ B) ಯೂರಿಪಿಡೀಸ್

C) ಸಾಫೋಕ್ಲಿಸ್ D) ಷೇಕ್ಸ್‌ಫಿಯರ್

9. ತೆಲುಗಿನ ವಿಶ್ವನಾಥ ಸತ್ಯನಾರಾಯಣ ಅವರ 'ಮಾ ಬಾಬು' ಕಾದಂಬರಿಯನ್ನು ಕನ್ನಡಕ್ಕೆ 'ಅನಾಥ ಪಕ್ಷಿ' ಎಂದು ಅನುವಾದಿಸಿರುವವರು:

A) ಸಿ.ರಾಘವನ್ B) ಟಿ.ಉಬೈದ್

C) ಕೆ.ಪಿ.ಶಂಕರನ್ D) ವೀರಭದ್ರ

10. ಸಾಮಾಜಿಕ ವಸ್ತುವನ್ನು ಆಧರಿಸಿ ರಚಿತವಾಗಿರುವ ಗಿರೀಶ್ ಕಾರ್ನಾಡರ ನಾಟಕ ಇದು.

A) ಅಗ್ನಿ ಮತ್ತು ಮಳೆ B) ನಾಗಮಂಡಲ

C) ಅಂಜುಮಲ್ಲಿಗೆ D) ತುಘಲಕ್

11. "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತರಾಘವಂ ನಾಯಕನಾಗೆ ಕೃತಿ ವಿಶ್ರುತಮೆನಿಪ್ಪುದು" ಎಂದು ಹೇಳಿರುವ ಕವಿ.

A) ಪಂಪ B) ಪೊನ್ನ C) ರನ್ನ D) ನಾಗಚಂದ್ರ

12. 'ಕನ್ನಡ ಬಾವುಟ' ಇದು ಯಾರ ಕೃತಿ.

A) ಬಿ.ಎಂ.ಶ್ರೀ B) ತೀ.ನಂ.ಶ್ರೀ

C) ಕುವೆಂಪು D) ಮಧುರ ಚೆನ್ನ

13. ಇವುಗಳಲ್ಲಿ ಗುಂಪಿಗೆ ಸೇರದಿರುವುದು ಯಾವುದು?

A) ವಡ್ಡಾರಾಧನೆ B) ಚಾವುಂಡರಾಯಪುರಾಣ

C) ಮುದ್ರಾಮಂಜೂಷ D) ಮಲ್ಲಿನಾಥಪುರಾಣ

14. ಹಾ.ಮಾ.ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ಕೃತಿ.

A) ಸಾಹಿತ್ಯ ಸಲ್ಲಾಪ B) ಜಾನಪದ ಸ್ವರೂಪ

C) ಸಲ್ಲಾಪ D) ಸಂಪ್ರತಿ

15. ಕೆಳಗಿನ ಜೋಡಿಗಳಲ್ಲಿ ಪರಸ್ಪರ ಹೊಂದಿಕೆಯಾಗದಿರುವುದು ಯಾವುದು?

A) ಎಸ್.ಎಲ್.ಭೈರಪ್ಪ– ಮಂದ್ರ

B) ಯು.ಆರ್.ಅನಂತಮೂರ್ತಿ– ಭಾರತೀಪುರ

C) ಮಿರ್ಜಿ ಅಣ್ಣರಾಯ– ನಿಸರ್ಗ

D) ಶಾಂತಿನಾಥ ದೇಸಾಯಿ– ಅವಧೇಶ್ವರಿ

16. ಇವುಗಳಲ್ಲಿ ಕಾಲಾನುಕ್ರಮದಲ್ಲಿ ರಚನೆಗೊಂಡ ಕೃತಿಗಳ ಸಾಲನ್ನು ಗುರುತಿಸಿರಿ:

A) ವೈಶಾಖ, ಬಂಡಾಯ, ಕುಸುಮ ಬಾಲೆ, ಕಲ್ಲುಕರಗುವ ಸಮಯ

B) ಬಂಡಾಯ, ಕುಸುಮ ಬಾಲೆ, ಕಲ್ಲುಕರಗುವ ಸಮಯ, ವೈಶಾಖ

C) ಕಲ್ಲುಕರಗುವ ಸಮಯ, ಬಂಡಾಯ, ಕುಸುಮ ಬಾಲೆ, ವೈಶಾಖ

D) ಕುಸುಮ ಬಾಲೆ, ಕಲ್ಲುಕರಗುವ ಸಮಯ, ವೈಶಾಖ, ಬಂಡಾಯ

17. 'ಬುಕ್ಕರಾಯನ ಧರ್ಮಸಮನ್ವಯ'ದ ಆಳ್ವಿಕೆಗೆ ಹೆಸರಾದ ಶಾಸನ ಇದು.

A) ಬೆಳತೂರು ಶಾಸನ B) ಶ್ರವಣ ಬೆಳಗೊಳ ಶಾಸನ

C) ಗಂಗಾಧರಂ ಶಾಸನ D) ಹಲ್ಮಿಡಿ ಶಾಸನ

18. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲ ಕಾದಂಬರಿ ಇದು.

A) ದುರ್ಗಾಸ್ತಮಾನ B) ಚಿಕವೀರರಾಜೇಂದ್ರ

C) ಕುಮುದಿನಿ D) ಮಯೂರ

19. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿ.

A) ದೇವನೂರು ಮಹಾದೇವ : ಗೋರಿಕಟ್ಟಿಕೊಂಡವರು

B) ಬೆಸಗರಹಳ್ಳಿ ರಾಮಣ್ಣ : ನಲ್ಲಿಯಲ್ಲಿ ನೀರು ಬಂದಿತು

C) ಕುಂ.ವೀರಭದ್ರಪ್ಪ : ಬೇಲಿ ಮತ್ತು ಹೊಲ

D) ಬೋಳುವಾರು ಮಹಮದ್ ಕುಂಞ : ಮಾರಿಕೊಂಡವರು

20. ಈ ಕೆಳಗಿನವುಗಳಲ್ಲಿ ಕಾಲಾನುಕ್ರಮಣಿಕೆಯಲ್ಲಿ ರಚನೆಗೊಂಡ ಕೃತಿಗಳ ಸಾಲನ್ನು ಗುರುತಿಸಿರಿ:

A) ಧರ್ಮಾಮೃತ, ಸಮಯಪರೀಕ್ಷೆ, ಕಬ್ಬಿಗರಕಾವ, ಜೀವಂಧರಚರಿತೆ

B) ಸಮಯಪರೀಕ್ಷೆ, ಧರ್ಮಾಮೃತ, ಜೀವಂಧರಚರಿತೆ, ಕಬ್ಬಿಗರಕಾವ

C) ಕಬ್ಬಿಗರಕಾವ, ಜೀವಂಧರಚರಿತೆ, ಸಮಯಪರೀಕ್ಷೆ, ಧರ್ಮಾಮೃತ

D) ಜೀವಂಧರಚರಿತೆ, ಕಬ್ಬಿಗರಕಾವ, ಧರ್ಮಾಮೃತ, ಸಮಯಪರೀಕ್ಷೆ

21. 'ಕಾಳಿ' ಎಂಬ ನಾಯಿಯ ನೆನಪಿಗೆ ಹಾಕಿದ ಪ್ರಸಿದ್ಧವಾದ ವೀರಗಲ್ಲು ಶಾಸನ ಇದು

A) ತಮಟಕಲ್ಲು ಶಾಸನ B) ಆತಕೂರು ಶಾಸನ

C) ಬೇಗೂರು ಶಾಸನ D) ಕೊತ್ತನೂರು ಶಾಸನ

22. ಕೆಳಗಿನ ಯಾವ ಶಾಸನದಲ್ಲಿ ಅಂಶಛಂದಸ್ಸಿನ 'ತ್ರಿಪದಿ' ಮೊದಲು ಬಳಕೆಯಾಗಿದೆ?

A) ದೇಕಬ್ಬೆಯ ಶಾಸನ B) ಅತ್ತಿಮಬ್ಬೆಯ ಶಾಸನ

C) ಬಾದಾಮಿ ಶಾಸನ D) ಲಕ್ಕುಂಡಿಯ ಶಾಸನ

23. 'ಚಂದ್ರಹಾಸನ ಕಥೆ'ಯನ್ನು ಒಳಗೊಂಡ ಕೃತಿ.

A) ಪಂಪಭಾರತ B) ಜೈಮಿನಿಭಾರತ

C) ಕುಮಾರವ್ಯಾಸಭಾರತ D) ಕೃಷ್ಣರಾಜಭಾರತ

24. "…..ಅಂತವನೊಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಂ" ಈ ಉಕ್ತಿ ಬರುವ ಕೃತಿ.

A) ಅಜಿತನಾಥಪುರಾಣ B) ಅನಂತನಾಥಪುರಾಣ

C) ಆದಿಪುರಾಣ D) ನೇಮಿನಾಥಪುರಾಣ

25. ಈ ಕೆಳಗಿನ ಯಾವ ಕೃತಿಯ ಮೇಲೆ ಭಾಸನ 'ಊರುಭಂಗ' ಭಟ್ಟನಾರಾಯಣನ 'ವೇಣಿಸಂಹಾರ' ಕೃತಿಗಳ ಪ್ರಭಾವ ಕಂಡುಬರುತ್ತದೆ.

A) ವಿಕ್ರಮಾರ್ಜುನ ವಿಜಯಂ B) ಸಾಹಸಭೀಮ ವಿಜಯಂ

C) ರಾಮಚಂದ್ರಚರಿತ ಪುರಾಣಂ D) ಕರ್ಣಾಟಕ ಕಾದಂಬರಿ

26. " ...ಮರುಳೇ ಪೊಲ್ಲಮೆಯೇ ಲೇಸು ನಲ್ಲರ ಮೆಯ್ಯೊಳ್" ಈ ಹೇಳಿಕೆ ಬರುವ ಕೃತಿ.

A) ಸೋಮನಾಥ ಚರಿತೆ B) ನಳಚರಿತ್ರೆ

C) ಲೀಲಾವತಿ ಪ್ರಬಂಧ D) ಯಶೋಧರಚರಿತೆ

27. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

A) ಪಂಪ– ಚಾಲುಕ್ಯ ಅರಿಕೇಸರಿ

B) ಪೊನ್ನ– ರಾಷ್ಟ್ರಕೂಟ ಇನೆಯ ಕೃಷ್ಣ

C) ರನ್ನ– ಇಮ್ಮಡಿ ಸತ್ಯಾಶ್ರಯ

D) ನಾಗಚಂದ್ರ– ಹೊಯ್ಸಳ ನರಸಿಂಹ

28. ಆರ್.ಎಲ್.ಸ್ಟೀವನ್‌ಸನ್ ಅವರ 'ಡಾ.ಜೆಕಿಲ್ ಅಂಡ್ ಹೈಡ್' ಕೃತಿಯನ್ನು ಕನ್ನಡಕ್ಕೆ 'ಪುರುಷಾಮೃಗ' ಎಂದು ಅನುವಾದಿಸಿರುವವರು:

A) ಕೆ.ಎಸ್.ಭಗವಾನ್ B) ಆನಂದ

C) ಪ್ರಧಾನ ಗುರುದತ್ತ D) ದೇ.ಜ.ಗೌ

29. ಕೇಶಿರಾಜನ ಪ್ರಕಾರ ಕನ್ನಡ ಭಾಷೆ ಎಷ್ಟು ಬಗೆಯ ಅಸಾಧಾರಣ ಲಕ್ಷಣಗಳನ್ನು ಹೊಂದಿದೆ?

A) ಏಳು B) ಎಂಟು C) ಆರು D) ಒಂಭತ್ತು

30. ಹರಿಹರನ ರಗಳೆಗಳಿಗೆ ಮೂಲಪ್ರೇರಣೆ.

A) ಪೆರಿಯ ಪುರಾಣ B) ಶೂನ್ಯಸಂಪಾದನೆ

C) ಭಗವತಿ ಆರಾಧನಾ D) ಯಾವುದೂ ಅಲ್ಲ

31. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

A) ತೊರವೆ ರಾಮಾಯಣ– ಕುಮುದೇಂದು

B) ಕುಮಾರರಾಮನ ಕಥೆ– ನಂಜುಂಡ

C) ರಾಮಧಾನ್ಯ ಚರಿತ್ರೆ– ಪುರಂದರದಾಸರು

D) ರಾಜಶೇಖರ ವಿಳಾಸ– ನಿಜಗುಣ ಶಿವಯೋಗಿ

32. “ಕಡೆಗೀಲಿಲ್ಲದೆ ಬಂಡಿ ಹೊಡೆಗೆಡುವುದು ಮಾಬುದೇ ಕಡೆಗೀಲು ಬಂಡಿಗಾಧಾರ, ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು.......” ಈ ವಚನದ ಕರ್ತೃ

A) ಬಸವಣ್ಣ B) ಅಕ್ಕಮಹಾದೇವಿ

C) ಜೇಡರ ದಾಸಿಮಯ್ಯ D) ಅಲ್ಲಮಪ್ರಭು

33. ‘ಕೂಡಲಚೆನ್ನಸಂಗಮದೇವ’ ಇದು ಯಾರ ವಚನಗಳ ಅಂಕಿತನಾಮ?

A) ಬಸವಣ್ಣ B) ಚೆನ್ನಬಸವಣ್ಣ

C) ಅಂಬಿಗರ ಚೌಡಯ್ಯ D) ಗಣದಾಸಿ ವೀರಣ್ಣ

34. ಈ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?

A) ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ: ಬಸವಣ್ಣ

B) ಹಸಿವಾದೊಡೆ ಭಿಕ್ಷಾನ್ನಗಳುಂಟು ತೃಷೆಯಾದರೆ ಕೆರೆಹಳ್ಳ ಬಾವಿಗಳುಂಟು: ಅಕ್ಕನಾಗಮ್ಮ

C) ಉದರ ವೈರಾಗ್ಯವಿದು: ಕನಕದಾಸರು

D) ತನು ನಿನ್ನದು ಜೀವ ನಿನ್ನದು: ಪುರಂದರದಾಸರು

35. ಇವುಗಳಲ್ಲಿ‘ವಾರ್ಧಕ’ ಷಟ್ಪದಿಯಲ್ಲಿ ರಚಿತವಾಗಿರುವ ಕಾವ್ಯ ಯಾವುದು?

A) ಜಯನೃಪ ಕಾವ್ಯ B) ತ್ರಿಪುರದಹನ ಸಾಂಗತ್ಯ

C) ಭಾಗವತ D) ಚೆನ್ನಬಸವಪುರಾಣ

36. “ಶ್ರೀವನಿತೆಯರಸನೆ ವಿಮಲ ರಾಜೀವ ಪೀಠಕ ಪಿತನೆ ಜಗಕತಿ। ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ...” ಈ ಪದ್ಯದಿಂದ ಆರಂಭವಾಗಿರುವ ಕೃತಿ.

A) ಕರ್ನಾಟಕ ಕಾದಂಬರಿ B) ಕರ್ನಾಟ ಭಾರತ ಕಥಾಮಂಜರಿ

C) ಕರ್ನಾಟಕ ಕಲ್ಯಾಣಕಾರಕ D) ಕರ್ನಾಟಕ ಪಂಚತಂತ್ರ

37. ‘ಪ್ರಭುಲಿಂಗಲೀಲೆ’ ಗ್ರಂಥವನ್ನು ರಚಿಸಿದವರು.

A) ಚಾಟುವಿಠಲನಾಥ B) ವಿರೂಪಾಕ್ಷ

C) ಪದ್ಮಣಾಂಕ D) ಚಾಮರಸ

38. ಇವುಗಳಲ್ಲಿ ಹೊಂದಿಕೆಯಾಗದ ಕೃತಿ ಯಾವುದು?

A) ಮುಪ್ಪಿನ ಷಡಕ್ಷರಿ– ಗಿರಿಜಾಕಲ್ಯಾಣ

B) ಭೀಮಕವಿ– ಬಸವಪುರಾಣ

C) ಮುದ್ದಣ– ಶ್ರೀರಾಮಪಟ್ಟಾಭಿಷೇಕ

D) ಮಹಲಿಂಗರಂಗ– ಅನುಭವಾಮೃತ

39. "ಬೆಲೆಯಿಂದಕ್ಕುಮೆ ಕೃತಿ ಗಾವಿಲ ಭುವನದ ಭಾಗ್ಯದಿಂದಕ್ಕುಂ ನೋಳ್ಪಂ
ಬೆಲೆಗೊಟ್ಟು ತಾರ ಮಧುವಂ ಮಲಯಾನಿಲನಂ ಮನೋಜನಂ ಕೌಮುದಿಯಂ"
ಈ ಪದ್ಯ ಸಾಲುಗಳು ಬರುವ ಕೃತಿ.

A) ಅನಂತನಾಥಪುರಾಣ B) ನೇಮಿನಾಥಪುರಾಣ

C) ಮಲ್ಲಿನಾಥಪುರಾಣ D) ಅಜಿತತೀರ್ಥಂಕರ ಪುರಾಣ

40. "ದ್ರಾವಿಡ ಭಾಷೆಗಳು ಸಂಸ್ಕೃತ ಜನ್ಯವಲ್ಲ" ಎಂದು ಹೇಳಿರುವ ಭಾಷಾವಿಜ್ಞಾನಿ ಯಾರು?

A) ಎಸ್.ಕೃಷ್ಣಮಾಚಾರ್ಯ B) ಟಿ.ಬರೋ

C) ಡಾ. ಕಾಲ್ಡ್‌ವೆಲ್ D) ಫ್ರಾನ್ಸಿಸ್ ಎಲ್ಲಿಸ್

41. ಕನ್ನಡ ಪದದೊಡನೆ ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡಬಾರದು. ಹಾಗೆ ಮಾಡಿದರೆ ಅದಕ್ಕೆ ಏನೆಂದು ಕರೆಯುತ್ತೇವೆ?

A) ದ್ವಿಗುಸಮಾಸ B) ಅರಿಸಮಾಸ

C) ಗಮಕಸಮಾಸ D) ಕ್ರಿಯಾಸಮಾಸ

42. 'ಗದಬ' ಮತ್ತು 'ಒಲ್ಲಾರಿ' ಇವು ಯಾವ ಭಾಷಾವರ್ಗಕ್ಕೆ ಸೇರಿರುತ್ತವೆ?

A) ಮಧ್ಯ ದ್ರಾವಿಡ B) ದಕ್ಷಿಣ ದ್ರಾವಿಡ

C) ಮೂಲದಕ್ಷಿಣ ದ್ರಾವಿಡ D) ಉತ್ತರ ದ್ರಾವಿಡ

43. 'ರಮ್ಯಾ ಜಾಣ ಹುಡುಗಿ' ಇಲ್ಲಿರುವ ವಾಚಕ ಯಾವುದು ಗುರುತಿಸಿ.

A) ವಸ್ತುವಾಚಕ B) ಗುಣವಾಚಕ

C) ಪರಿಮಾಣವಾಚಕ D) ದಿಗ್ವಾಚಕ

44. ‘ರಾಮನಿಗಿಂತ ಕೃಷ್ಣನೇ ಬುದ್ಧಿವಂತ’, ‘ಲಕ್ಷ್ಮಿಗಿನ್ನ ಶಾರದೆಯೇ ಚೆನ್ನ’–ಈ ವಾಕ್ಯಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ:

A) ಸಹತ್ವ ವಿಭಕ್ತಿ B) ಗಂತವ್ಯ ವಿಭಕ್ತಿ

C) ತರತಮ ಭಾವ ವಿಭಕ್ತಿ D) ಉದ್ದಿಷ್ಟ ವಿಭಕ್ತಿ

45. ಇವು ಕನ್ನಡದ ಉಪಭಾಷೆಗಳು.

A) ಹವ್ಯಕ ಮತ್ತು ಸೋಲಿಗ B) ಬಡಗ ಮತ್ತು ಕಸಬ

C) ಸವಾರ ಮತ್ತು ಮನ್ನೆ D) ಉರಲಿ ಮತ್ತು ಪಣಿಯ

46. ಯಾವ ಭಾಷೆಯಲ್ಲಿ ಸಾಮಾನ್ಯವಾಗಿ “ಮೂರ್ಧನ್ಯ ಧ್ವನಿಗಳು ದಂತ ಧ್ವನಿಗಳಾಗಿ ಪರಿವರ್ತನೆಯಾಗುವುದು” ಕಂಡುಬರುತ್ತದೆ?

A) ತಮಿಳು B) ಕನ್ನಡ

C) ತೆಲುಗು D) ಮಲೆಯಾಳಂ

47. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

A) ಕ್ರಿಯಾಸಮಾಸ : ಕೆಳೆಗೊಂಡ

B) ಗಮಕಸಮಾಸ : ಆ ಮನೆ

C) ಬಹುವ್ರೀಹಿಸಮಾಸ : ಮೆಲ್ನುಡಿ

D) ತತ್ಪುರುಷ ಸಮಾಸ : ಕನ್ನಡವಕ್ಕಿ

48. ‘ಕನ್ನಡಿಗ’ ಎಂಬುದು ಯಾವುದಕ್ಕೆ ಉದಾಹರಣೆಯಾಗಿದೆ?

A) ಅವ್ಯಯ B) ತದ್ಧಿತಾಂತ C) ಕೃದಂತ D) ಧಾತು

49. ‘ಕೊಳ್’ ಪದದ ಹೊಸಗನ್ನಡ ರೂಪ.

A) ಕೊಳ್ಳು B) ಕೊಡು C) ಕೋಲು D) ಕೊಲ್ಲು

50. ಇವು ಹಳಗನ್ನಡ ಸಪ್ತಮಿ ವಿಭಕ್ತಿ ಪ್ರತ್ಯಯಗಳು.

A) ಆನ್, ಆಮ್ B) ಒಳಗೆ ಅಲ್ಲಿ

C) ಉಳ್, ಒಳ್ D) ಇನ್, ಇಮ್

51. ‘ಜಯವಾಗಲಿ’ ‘ಹೋಗಲಿ’ ಇವು ಯಾವ ಬಗೆಯ ಕ್ರಿಯಾಪದಗಳು.

A) ಆತ್ಮಾರ್ಥಕ B) ನಿಷೇಧಾರ್ಥ

C) ಸಂಭಾವನಾರ್ಥ D) ವಿಧ್ಯರ್ಥಕ

52. ಸಂಸ್ಕೃತದ ‘ಲ’ಕಾರಕ್ಕೆ ಬಳಸುವ ‘ಳ’ ಅಕ್ಷರವನ್ನು ಹೀಗೆ ಕರೆಯುವರು.

A) ರಳ B) ಕುಳ C) ಕ್ಷಳ D) ರೇಫ

53. ಇವುಗಳಲ್ಲಿ ಅನ್ಯದೇಶ್ಯ ಪದಗಳು ಯಾವುವು?

A) ತೆಂಕಣ ಮತ್ತು ಬಡದಣ B) ರೈತ ಮತ್ತು ಬಂದೂಕ

C) ನೇಸರು ಮತ್ತು ತಿಂಗಳು D) ಬೋನ ಮತ್ತು ಬಾನು

54. ‘The Irula Language’ ಈ ಕೃತಿಯ ಲೇಖಕರು.

A) ಕಮಿಲ್ ಜ್ವೆಲಿಬಿಲ್ B) ಎಸ್.ಕೆ.ಚಟರ್ಜಿ

C) ಟಿ.ಮೀನಾಕ್ಷಿ ಸುಂದರಂ D) ಗುಂಡರ್ಟ್

55. ‘ಕ’ ಕಾರಕ್ಕೆ ಬದಲಾಗಿ ‘ಶ’ಕಾರ ‘ಚ’ ಕಾರಗಳು ಬರುವುದಕ್ಕೆ ಏನೆಂದು ಕರೆಯಲಾಗುತ್ತದೆ?

A) ತಾಲವ್ಯೀಕರಣ B) ಕಂಠ್ಯವ್ಯೀಕರಣ

C) ಮೂರ್ಧನ್ಯಕರಣ D) ಓಷ್ಠೀಕೃತ

56. ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು ಎಷ್ಟು?

A) ಐದು B) ನಾಲ್ಕು C) ಹತ್ತು D) ಎರಡು

57. ಯಾವ ಭಾಷೆಗಳಲ್ಲಿ ಲಿಂಗವಿವಕ್ಷೆ ಕಂಡುಬರುವುದಿಲ್ಲ?

A) ಬ್ರಾಹುಈ ಮತ್ತು ತೊದ B) ತೊದ ಮತ್ತು ಪರ್ಜಿ

C) ಕೂಡುಬ್ ಮತ್ತು ಕುಬಿ D) ಗೋಂಡಿ ಮತ್ತು ಪರ್ಜಿ

58. ಅರೆಬಂಡೆ ಇದು

A) ದ್ವಿರುಕ್ತಿ B) ಕ್ರಿಯಾಪದ

C) ಅನುಕರಣಾವ್ಯಯ D) ಅನ್ಯದೇಶಿಯ

59. ‘ಕ್, ಟ್, ತ್, ಪ್’ ಇವು

A) ಘೋಷಧ್ವನಿಗಳು B) ಅಘೋಷಧ್ವನಿಗಳು

C) ಅನುನಾಸಿಕಗಳು D) ಅವರ್ಗೀಯಗಳು

60. ಇದು ಅಭಿವ್ಯಾಪಕ ಸರ್ವನಾಮ

A) ನಾಮ್ B) ಆಮ್ C) ತಾನ್ D) ಅವನ್

61. ‘Historical grammar of old Kannada Inscriptions’-ಈ ಕೃತಿಯ ಲೇಖಕರು

A) ಎ.ಎನ್.ನರಸಿಂಹಯ್ಯ B) ಆರ್.ನರಸಿಂಹಾಚಾರ್

C) ಜಿ.ಎಸ್.ಗಾಯಿ D) ಕುಶಾಲಪ್ಪಗೌಡ

62. ‘ಕರ್ಣಾಟಕ ಸಂಸ್ಕೃತಿ ಸಮೀಕ್ಷೆ’ ಎಂಬ ಸಂಶೋಧನೆ ಕೃತಿಯ ಕರ್ತೃ

A) ಶಂ.ಬಾ.ಜೋಶಿ B) ಎಂ.ಮರಿಯಪ್ಪಭಟ್ಟ

C) ರಂ.ಶ್ರೀ.ಮುಗಳಿ D) ಎಚ್.ತಿಪ್ಪೇರುದ್ರಸ್ವಾಮಿ

63. “ಪ್ರತಿಭೆಯುಂ ಅಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ” ಈ ಮಾತು ಬರುವ ಕೃತಿ.

A) ಕಾವ್ಯಾವಲೋಕನ B) ಶಬ್ದಮಣಿದರ್ಪಣ

C) ಅಪ್ರತಿಮ ವೀರಚರಿತೆ D) ಕವಿರಾಜಮಾರ್ಗ

64. ಬಸವಣ್ಣನವರಿಗೆ ಸಂಬಂಧಿಸಿದ ‘ಅರ್ಜುನವಾಡ ಶಾಸನ’ವನ್ನು ಮೊದಲು ಕಂಡುಹಿಡಿದವರು.

A) ಆರ್.ಶೇಷಶಾಸ್ತ್ರಿ B) ಎಸ್.ರಾಜಶೇಖರ

C) ಕೆ.ಜಿ.ಕುಂದಣಗಾರ D) ಎನ್.ಎಸ್.ರಾಜಪುರೋಹಿತ

65. ಸಂಶೋಧಕನ ಪ್ರಥಮ ಕರ್ತವ್ಯ ಇದು

A) ಮೂಲ ಆಕರಗಳನ್ನು ಶೋಧಿಸುವುದು

B) ಆನುಷಂಗಿಕ ಆಕರಗಳನ್ನು ಅವಲಂಬಿಸುವುದು

C) ಕ್ಷೇತ್ರಕಾರ್ಯವನ್ನು ಮಾಡದಿರುವುದು

D) ವಿಷಯ ವಿಶ್ಲೇಷಣೆ ಮಾಡುವುದು

66. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿ.

A) ಸಾಹಿತ್ಯ ಸಂಶೋಧನ ಮಾರ್ಗ : ಸಂಗಮೇಶ ಸವದತ್ತಿಮಠ

B) ಸಂಶೋಧನೆ : ಎಂ.ಎಂ.ಕಲಬುರ್ಗಿ

C) ಕನ್ನಡ ಸಂಶೋಧನಶಾಸ್ತ್ರ : ಬಿ.ವ್ಹಿ.ಶಿರೂರ

D) ಸಂಶೋಧನ ಮಾರ್ಗ : ಹೊಸ್ಕೆರೆ ಶಿವಸ್ವಾಮಿ

67. ಕ್ಷೇತ್ರಕಾರ್ಯದಲ್ಲಿ ಸಂಶೋಧಕ ಅನುಸರಿಸಬೇಕಾದ ಸರಿಯಾದ ಕ್ರಮವನ್ನು ಗುರುತಿಸಿ.

A) ಸಂದರ್ಶನ, ವೀಕ್ಷಣೆ, ಪ್ರಶ್ನಾವಳಿ, ಪರೀಕ್ಷಣೆ

B) ವೀಕ್ಷಣೆ, ಸಂದರ್ಶನ, ಪರೀಕ್ಷಣೆ, ಪ್ರಶ್ನಾವಳಿ

C) ಪರೀಕ್ಷಣೆ, ವೀಕ್ಷಣೆ, ಪ್ರಶ್ನಾವಳಿ, ಸಂದರ್ಶನ

D) ಪ್ರಶ್ನಾವಳಿ, ಸಂದರ್ಶನ, ವೀಕ್ಷಣೆ, ಪರೀಕ್ಷಣೆ

68. ಇವುಗಳಲ್ಲಿ ಯಾವ ಜೋಡಿ ಸರಿ ಹೊಂದುವುದಿಲ್ಲ?

A) ಸೌಂದರ್ಯ ಸಮೀಕ್ಷೆ– ಜಿ.ಎಸ್.ಶಿವರುದ್ರಪ್ಪ

B) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ– ಎಂ.ಚಿದಾನಂದಮೂರ್ತಿ

C) ಪೀಠಿಕೆಗಳು ಲೇಖನಗಳು– ಎ.ವೆಂಕಟಸುಬ್ಬಯ್ಯ

D) ಸಮಾಲೋಕನ– ತೀ.ನಂ.ಶ್ರೀಕಂಠಯ್ಯ

69. ಇವುಗಳಲ್ಲಿ ಶಿ.ಶಿ.ಬಸವನಾಳರು ಸಂಪಾದಿಸಿಕೊಟ್ಟಿರುವ ಕೃತಿ ಯಾವುದು?

A) ಬಸವಣ್ಣನವರ ಷಟ್‌ಸ್ಥಲದ ವಚನಗಳು

B) ಅಲ್ಲಮನ ವಚನಗಳು

C) ಸಿದ್ಧರಾಮೇಶ್ವರ ವಚನಗಳು

D) ಚೆನ್ನಬಸವಣ್ಣನವರ ವಚನಗಳು

70. ಇವರುಗಳಲ್ಲಿ ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ ಮಹತ್ತ್ವದ ಸಾಧನೆ ಮಾಡಿರುವವರನ್ನು ಗುರುತಿಸಿ:

1. ಫ.ಗು.ಹಳಕಟ್ಟಿ 2. ಜಿ.ಎಚ್.ನಾಯಕ 3. ಪ್ರಭುಶಂಕರ 4. ಆರ್.ಸಿ.ಹಿರೇಮಠ

A) 1 ಮತ್ತು 2 B) 2 ಮತ್ತು 3

C) 1 ಮತ್ತು 4 D) 3 ಮತ್ತು 4

71. 'ಬಸವರಾಜದೇವರ ರಗಳೆ' ಕೃತಿಯನ್ನು ಮೊದಲಿಗೆ ಸಂಪಾದಿಸಿಕೊಟ್ಟವರು ಯಾರು?

A) ಟಿ.ಎಸ್.ವೆಂಕಣ್ಣಯ್ಯ B) ಎ.ಆರ್.ಕೃಷ್ಣಶಾಸ್ತ್ರೀ

C) ಎನ್.ಬಸವರಾಧ್ಯ D) ಎಚ್.ಶೇಷಯ್ಯಂಗಾರ್

72. ತುಳು ಜಾನಪದ ಮಹಾಕಾವ್ಯ ಇದು.

A) ಪಟ್ಟೋಲೆ ಪಳಮೆ B) ಕಲೇವಾಲ

C) ಮಲೆಯಮಾದೇಶ್ವರ D) ಸಿರಿ

73. ೨ನೆಯ ನಾಗವರ್ಮನ 'ವರ್ಧಮಾನ ಪುರಾಣ'ವನ್ನು ಮೊದಲಿಗೆ ಸಂಶೋಧಿಸಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಇವರದು.

A) ಎಂ.ಎಂ.ಕಲ್ಬುರ್ಗಿ B) ಆರ್.ಸಿ.ಹಿರೇಮಠ

C) ಬಿ.ಎಸ್.ಸಣ್ಣಯ್ಯ D) ಜಿ.ವರದರಾಜರಾವ್

74. ಕನ್ನಡದಲ್ಲಿ 'ಟ್ಯಾಬ್ಲಾಯ್ಡ್' ಪತ್ರಿಕೆಗಳ ಶಕೆಯನ್ನು ಆರಂಭಿಸಿದವರು ಯಾರು?

A) ಪಿ.ಲಂಕೇಶ್ B) ಬಿ.ವಿ.ವೈಕುಂಠರಾಜು

C) ರವಿ ಬೆಳಗೆರೆ D) ಜಾಣಗೆರೆ ವೆಂಕಟರಾಮಯ್ಯ

75. ಇವುಗಳಲ್ಲಿ 'ಔಟ್‌ಪುಟ್ ಡಿವೈಸ್' ಯಾವುದು?

1. ಮಾನಿಟರ್ 2. ಪ್ರಿಂಟರ್ 3. ಕೀಬೋರ್ಡ್ 4. ಮೌಸ್

A) 3 ಮತ್ತು 4 B) 1 ಮತ್ತು 2

C) 1 ಮತ್ತು 3 D) 2 ಮತ್ತು 4

76. ಕನ್ನಡದ ಅತ್ಯಂತ ಪ್ರಾಚೀನ ವಾರಪತ್ರಿಕೆ 'ಮೈಸೂರು ಗೆಜೆಟ್'ನ ಸಂಪಾದಕರು ಯಾರು?

A) ಎಂ.ಎಸ್.ಪುಟ್ಟಣ್ಣ B) ಡಿ.ವಿ.ಗುಂಡಪ್ಪ

C) ಟಿ.ಸಿ.ಶ್ರೀನಿವಾಸಚಾರ್ಯ D) ಎನ್.ರಿಕೆಟ್

77. 'ರೆಸೆಯಿಂ ಕಾಲಾಗ್ನಿರುದ್ರಂ ಪೊರಮಡುವವೊಲಂತಾ ಸರೋಮಧ್ಯದಿಂ... ಪೊರಮಟ್ಟು...' ಈ ಪದ್ಯದ ಸಾಲಿನಲ್ಲಿ ಬಳಕೆಯಾಗಿರುವ ಅಲಂಕಾರ ಯಾವುದು?

A) ರೂಪಕಾಲಂಕಾರ B) ಉಪಮಾಲಂಕಾರ

C) ಶ್ಲೇಷಾಲಂಕಾರ D) ದೀಪಕಾಲಂಕಾರ

78. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದುವುದಿಲ್ಲ?

A) ಆರ್.ಆರ್.ದಿವಾಕರ್ : ಕರ್ಮವೀರ

B) ಮೊಹರೆ ಹನುಮಂತರಾಯ : ಸಂಯುಕ್ತ ಕರ್ನಾಟಕ

C) ರಾಮನಾಥ ಗೋಯಂಕಾ : ವಿಜಯ ಕರ್ನಾಟಕ

D) ಪಿ.ಎಂ.ಪೈ : ಉದಯವಾಣಿ

79. 'ಕಂಪ್ಯೂಟರ್' ಪಿತಾಮಹ ಯಾರು?

A) ಚಾರ್ಲ್ಸ್ ಬ್ಯಾಬೇಜ್ B) ಸ್ಟೀವ್ ಜಾಬ್ಸ್

C) ಬಿಲ್ ಗೇಟ್ಸ್ D) ಲ್ಯಾರಿ ಪೇಜ್

80. ಇವುಗಳಲ್ಲಿ ಗುಂಪಿಗೆ ಸೇರದ್ದು ಯಾವುದು?

A) ವಿಂಡೋಸ್ B) ಲಿನಕ್ಸ್ C) ಟ್ವಿಟ್ಟರ್ D) ಉಬುಂಟು

81. 1. ಜನಪದ ಕಥೆಗಳ ವರ್ಗೀಕರಣದಲ್ಲಿ 'ಆಶಯ' ಮತ್ತು 'ವರ್ಗ' ಮಹತ್ತ್ವದ ಪಾತ್ರವಹಿಸಿವೆ.
2. Motif ಕಥೆಯ ವಸ್ತುವನ್ನು ಕುರಿತದ್ದು, Type ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದು.

A) ಒಂದನೆ ಹೇಳಿಕೆ ತಪ್ಪು, ಎರಡನೆಯದು ಸರಿ

B) ಎರಡೂ ಹೇಳಿಕೆಗಳು ಸರಿ

C) ಒಂದನೆಯದು ಸರಿ, ಎರಡನೆಯದು ತಪ್ಪು

D) ಎರಡೂ ಹೇಳಿಕೆಗಳು ತಪ್ಪು

82. "The Standard Dictionary of Folklore, Mythology and Legend" ಈ ಕೃತಿಯ ಸಂಪಾದಕರು ಯಾರು?

A) ಸ್ಟಿತ್ ಥಾಮ್ಸನ್ B) ಎ.ಎಚ್.ಕ್ರಾಪ್ಪೆ

C) ಮರಿಯಾ ಲೀಚ್ D) ಜೆ.ಜೆ.ಹರ್ಡರ್

83. "ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು" ಎಂದು ಹೇಳಿರುವ ವಿದ್ವಾಂಸ.

A) ಬೇಕನ್ B) ಎಸ್.ಜಿ.ಚಾಂಪಿಯನ್

C) ಆರ್.ಸಿ.ಟ್ರೆಂಚ್ D) ಜಾನ್ ರಸೆಲ್

84. "ಮೊಗ್ಗರಳಿ ಹೂವಾಗಿ ಪುಷ್ಪತಾನಲ್ಲ
ಹಿಗ್ಗಲಿಸಿ ನೋಡಿದರೆ ಪರಿಮಳವೆ ಇಲ್ಲ"

A) ಜೋಳ B) ದೋಸೆ C) ಕೊಡೆ D) ಗೆಣಸು

85. ಪಡುವಲ ಪಾಯ ಯಕ್ಷಗಾನದ ಪ್ರಭೇದಗಳು

1. ತೆಂಕುತಿಟ್ಟು 2. ದೊಡ್ಡಾಟ 3. ಸಣ್ಣಾಟ 4. ಬಡಗುತಿಟ್ಟು

A) 2 ಮತ್ತು 4 B) 1 ಮತ್ತು 4 C) 1 ಮತ್ತು 2 D) 3 ಮತ್ತು 4

86. ಕಾಡುಗೊಲ್ಲರ ವಿಶಿಷ್ಟ ಕಲೆ ಇದು.

A) ಹೋಳಿ ಹಳಬು B) ಚುಣ್ಣಕಲೆ

C) ಗಣೇಪದ D) ಪಿಲಿಪಂಜಿ ಕುಣಿತ

87. "ಕವಿತ್ವಬೀಜಂ ಪ್ರತಿಭಾನಂ" ಎಂದು ಹೇಳಿರುವ ಆಲಂಕಾರಿಕ

A) ಭಾಮಹ B) ವಾಮನ C) ರುದ್ರಟ D) ಹೇಮಚಂದ್ರ

88. "ಕಾವ್ಯ ಭಾವಾನುಭವದ ಹುಚ್ಚು ಹೊಳೆಯಲ್ಲ; ಭಾವವಿಮೋಚನೆ; ಅದು ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲ; ವ್ಯಕ್ತಿತ್ವದ ನಿರಸನ" ಇದು ಯಾರ ಹೇಳಿಕೆ:

A) ಟಿ. ಎಸ್.ಎಲಿಯಟ್ B) ಎ.ಸಿ.ಬ್ರಾಡ್ಲೆ

C) ಎಡ್ವರ್ಡ್ ಬುಲ್ಲೊ D) ಐ.ಎ.ರಿಚರ್ಡ್ಸ್

89. ಇವುಗಳಲ್ಲಿ ಸರಿಯಾದುದ್ದನ್ನು ಗುರುತಿಸಿ

1. ಮಮ್ಮಟ : ಕಾವ್ಯಾದರ್ಶ 2. ವಿಶ್ವನಾಥ : ಸಾಹಿತ್ಯದರ್ಪಣ

3. ಅಪ್ಪಯ್ಯದೀಕ್ಷಿತ : ಅಭಿನವಭಾರತಿ 4. ಜಗನ್ನಾಥ : ರಸಗಂಗಾಧರ

A) 1 ಮತ್ತು 2 B) 2 ಮತ್ತು 3 C) 2 ಮತ್ತು 4 D) 3 ಮತ್ತು 4

90. ರಚನೆಯಾಗಿರುವ ಕಾಲಾಕ್ರಮಕ್ಕನುಗುಣವಾಗಿ ಸರಿಯಾದುದ್ದನ್ನು ಗುರುತಿಸಿ.

A) ಭಟ್ಟಲೊಲ್ಲಟ, ಶ್ರೀಶಂಕುಕ, ಭಟ್ಟನಾಯಕ, ಅಭಿನವಗುಪ್ತ

B) ಶ್ರೀಶಂಕುಕ, ಭಟ್ಟಲೊಲ್ಲಟ, ಭಟ್ಟನಾಯಕ, ಅಭಿನವಗುಪ್ತ

C) ಭಟ್ಟನಾಯಕ, ಶ್ರೀಶಂಕುಕ, ಅಭಿನವಗುಪ್ತ, ಭಟ್ಟಲೊಲ್ಲಟ

D) ಅಭಿನವಗುಪ್ತ, ಭಟ್ಟಲೊಲ್ಲಟ, ಭಟ್ಟನಾಯಕ, ಶ್ರೀಶಂಕುಕ

91. "ಯಾವುದು ಶಾಸ್ತ್ರಸಮ್ಮತವಲ್ಲದಿದ್ದರೂ ಲೋಕಸಮ್ಮತವಲ್ಲದಿದ್ದರೂ ಪರಂಪರೆಯ ಮೂಲಕ ಕವಿಗಳಿಂದ ಪ್ರಯೋಗವಾಗುತ್ತಿರುವುದೋ ಅದೇ ಕವಿಸಮಯ" ಎಂದು ಹೇಳಿರುವ ಆಲಂಕಾರಿಕ.

A) ಭಾಮಹ B) ಮಮ್ಮಟ C) ದಂಡಿ D) ರಾಜಶೇಖರ

92. ರಚನೆಯ ಕಾಲಕ್ರಮಕ್ಕನುಗುಣವಾಗಿ ಸರಿಯಾದುದನ್ನು ಗುರುತಿಸಿರಿ.

A) ಹೊರೇಸ್, ಅರಿಸ್ಟಾಟಲ್, ಬೆನೆಡೆಟ್ಟೊ ಕ್ರೋಚೆ, ಲಾಂಜಿನಸ್

B) ಅರಿಸ್ಟಾಟಲ್, ಹೊರೇಸ್, ಲಾಂಜಿನಸ್, ಬೆನೆಡೆಟ್ಟೊ ಕ್ರೋಚೆ

C) ಲಾಂಜಿನಸ್, ಹೊರೇಸ್, ಅರಿಸ್ಟಾಟಲ್, ಬೆನೆಡೆಟ್ಟೊ ಕ್ರೋಚೆ

D) ಬೆನೆಡೆಟ್ಟೊ ಕ್ರೋಚೆ, ಅರಿಸ್ಟಾಟಲ್, ಲಾಂಜಿನಸ್, ಹೊರೇಸ್

93. 'ದಿ ಪೊಯೆಟಿಕ್ ಇಮೇಜ್' ಇದು ಯಾರ ಕೃತಿ

A) ಜಾನ್ ಡ್ರೈಡನ್ B) ಪ್ಲೇಟೊ

C) ಸಿ.ಡಿ.ಲೂಯಿ D) ಎಫ್.ಆರ್.ಲೀವಿಸ್

94. "ಅನೌಚಿತ್ಯವನ್ನು ಬಿಟ್ಟರೆ ರಸಭಂಗಕ್ಕೆ ಬೇರೊಂದು ಕಾರಣವಿಲ್ಲ. ಲೋಕಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿರುವ ಔಚಿತ್ಯವನ್ನರಿತು ಅಂಗಗಳನ್ನು ಅಳವಡಿಸುವುದೇ ರಸದ ಪರಮ ರಹಸ್ಯ" ಇದು ಯಾರ ಹೇಳಿಕೆ.

A) ಕ್ಷೇಮೇಂದ್ರ B) ಮಹಿಮಭಟ್ಟ

C) ಧನಂಜಯ D) ಆನಂದವರ್ಧನ

95. "ಶಬ್ದಾರ್ಥೌಸಹಿತೌ ವಕ್ರಕವಿವ್ಯಾಪಾರಶಾಲಿನಿ
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ"–ಹೀಗೆಂದು ಹೇಳಿರುವ ಆಲಂಕಾರಿಕ ಯಾರು?

A) ಭಾಮಹ B) ರುದ್ರಟ C) ಕ್ಷೇಮೇಂದ್ರ D) ಕುಂತಕ

96. ಕೆಳಗಿನವುಗಳಲ್ಲಿ ಸರಿಯಾಗಿ ಹೊಂದುವವುಗಳನ್ನು ಗುರುತಿಸಿರಿ:

1. ಹಾಸ್ಯ–ಶೃಂಗಾರ
2. ಕರುಣ–ಶೋಕ
3. ಭೀಭತ್ಸ–ಭಯ
4. ಅದ್ಭುತ–ವಿಸ್ಮಯ

A) 1 ಮತ್ತು 2 B) 2 ಮತ್ತು 4

C) 3 ಮತ್ತು 4 D) 2 ಮತ್ತು 3

97. ಇವುಗಳಲ್ಲಿ ಡಾಂಟೆಯ ಕೃತಿ ಯಾವುದು?

A) ಪ್ಯಾರಾಡೈಸ್ ಲಾಸ್ಟ್ B) ಇಲಿಯಡ್

C) ಡಿವೈನ್ ಕಾಮಿಡಿ D) ಈನಿಯಡ್

98. 'Biographia Literaria' ಇದು ಯಾರ ಕೃತಿ.

A) ಕೋಲಿರಿಜ್ B) ವರ್ಡ್ಸ್‌ವರ್ತ್

C) ಷೆಲ್ಲಿ D) ಐ.ಎ.ರಿಚರ್ಡ್ಸ್

99. ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರವಿರುವ ಸ್ಥಳ

A) ರಾಮನಗರ B) ಹಾವೇರಿ

C) ಉಡುಪಿ D) ತುಮಕೂರು

100. 'ತೊಗಲುಗೊಂಬೆ'ಯನ್ನು ಆಡಿಸುವುದು ಯಾವ ಸಮುದಾಯಕ್ಕೆ ಸೇರಿದವರ ಪ್ರಮುಖ ವೃತ್ತಿ ಎನಿಸಿದೆ?

A) ಕಿಳ್ಳೇಕ್ಯಾತರು B) ಗೊಂಡರು

C) ಡೊಂಬರು D) ಹಕ್ಕಿಪಿಕ್ಕಿಯವರು

101. ಯಕ್ಷಗಾನ ಬಯಲಾಟದ ಮೂಡಲಪಾಯ ಸಂಪ್ರದಾಯಕ್ಕೆ ಏನೆಂದು ಹೆಸರು?

A) ಸಣ್ಣಾಟ B) ದೊಡ್ಡಾಟ

C) ತಿರಕೊತ್ತು D) ಅಟ್ಟದಾಟ

102. "ಮನುಷ್ಯರು ಪರಸ್ಪರ ಸ್ಪಂದಿಸಲು ಬಳಸುವ ಯಾದೃಚ್ಚಿಕ ಸ್ವನ ಸಂಕೇತಗಳ ವ್ಯವಸ್ಥೆಯೇ ಭಾಷೆ" ಹೀಗೆಂದು ಹೇಳಿರುವ ವಿದ್ವಾಂಸ.

A) ಸ್ಟುರ್ಟೆವಾಂಟ್ B) ಎಡ್ವರ್ಡ್ ಸಫೀರ್

C) ಹೆನ್ರಿಸ್ವೀಟ್ D) ಸಿ.ಎಫ್.ಹಾಕೆಟ್

103. 'ಕಾದಂಬರಿ ಕರತಲರಂಗಭೂಮಿ' ಎಂಬ ಮಾತನ್ನು ವಿಮರ್ಶಾಕ್ಷೇತ್ರಕ್ಕೆ ಕೊಟ್ಟವರು

A) ಬಿ.ಎಂ.ಶ್ರೀ B) ದ.ರಾ.ಬೇಂದ್ರೆ

C) ಕುವೆಂಪು D) ಪು.ತಿ.ನ

104. 'ಓಬಿರಾಯನ ಕಾಲ' ಎಂಬುದು

A) ಗಾದೆ B) ಒಗಟು

C) ಚಾಟೋಕ್ತಿ D) ನುಡಿಗಟ್ಟು

105. "ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೆ" ಈ ಹೇಳಿಕೆ ಬರುವ ಕೃತಿ.

A) ರಸರತ್ನಾಕರ B) ಕವಿರಾಜಮಾರ್ಗ

C) ಕಾವ್ಯಾದರ್ಶ D) ಶೃಂಗಾರ ರತ್ನಾಕರ

106. 'ಮತ್ತೇಭವಿಕ್ರೀಡಿತ' ವೃತದ ಲಕ್ಷಣ ಇದು.

A) ಮಸಜಸತತಗ B) ಭರನಭಭರಲಗ

C) ರಸಜಜಭರ D) ಸಭರನಮಯಲಗ

107. ‘ಸಾಂಗತ್ಯ’ ಛಂದಸ್ಸಿನಲ್ಲಿ ರಚಿತವಾಗಿರುವ ಕೃತಿಗಳನ್ನು ಗುರುತಿಸಿರಿ.

1. ಸೊಬಗಿನ ಸೋನೆ
2. ಸೋಮನಾಥ ಚರಿತೆ
3. ಬಸವಪುರಾಣ
4. ಹದಿಬದೆಯಧರ್ಮ

A) 1 ಮತ್ತು 2 B) 2 ಮತ್ತು 4

C) 1 ಮತ್ತು 4 D) 3 ಮತ್ತು 4

108. ‘ಕಂದ’ ಮತ್ತು ‘ರಗಳೆ’ ಇವು ಯಾವ ಬಗೆಯ ಛಂದಸ್ಸಿಗೆ ಸೇರಿವೆ?

A) ಮಾತ್ರಾಛಂದಸ್ಸು B) ಅಂಶಛಂದಸ್ಸು

C) ಅಕ್ಷರಛಂದಸ್ಸು D) ದ್ರಾವಿಡಛಂದಸ್ಸು

109. ಅಕ್ಕರದಲ್ಲಿ ಎಷ್ಟು ಬಗೆ?

A) ಆರು B) ನಾಲ್ಕು

C) ಐದು D) ಮೂರು

110. “ಸುಬ್ಬಿಮ್ಮೆ ನೆರೆದಾಳ ಸುಬ್ಬಿಗೇನೊಯ್ಯಾಲೆ
ಕೊಬ್ಬರಿ ಕಾರ ತಿಳಿದುಪ್ಪ” ಈ ಪದ್ಯ ಯಾವ ಛಂದಸ್ಸಿನಲ್ಲಿದೆ?

A) ಏಳೆ B) ಕಂದಪದ್ಯ

C) ಸಾಂಗತ್ಯ D) ತ್ರಿಪದಿ

111. “ಲಯದಲ್ಲಿ ಒಂದು ಹೊಸಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ” ಏನೆಂದು ಕರೆಯುತ್ತೇವೆ.

A) ಮುಡಿ B) ಪದ್ಮಗಣ

C) ಅನಾಗತ D) ಗಣಪರಿವೃತ್ತಿ

112. ಕನ್ನಡದ ಯಾವ ಛಂದೋಗ್ರಂಥದಲ್ಲಿ 'ವಡಿ'ಯ ಪ್ರಸ್ತಾಪ ಮೊದಲಿಗೆ ಕಂಡುಬರುತ್ತದೆ?

A) ಛಂದೋಬುಧಿ B) ಕವಿಜಿಹ್ವಾಬಂಧನ

C) ಛಂದಸ್ಸಾರ D) ನಂದಿಛಂದೋರ್ಣವ

113. "ಪ್ರಕೃತಿಸಿದ್ಧವಾದ ಪದಾರ್ಥವನ್ನು ಮನುಷ್ಯ ವಿವೇಕದಿಂದ ಸೊಗಸುಗೊಳಿಸಿದರೆ ಅದು ಸಂಸ್ಕೃತಿ..... ಬೀದಿಯಲ್ಲಿ ನಾವು ಆಡುವ, ಕೇಳುವ ಮಾತು ಪ್ರಕೃತಿ" ಈ ಹೇಳಿಕೆ

A) ಸರಿ ಸರಿ B) ತಪ್ಪು ತಪ್ಪು

C) ಸರಿ ತಪ್ಪು D) ತಪ್ಪು ಸರಿ

114. "ಮಾರ್ಕ್ಸಿಸಂ ಅಂಡ್ ಪೊಯಟ್ರಿ" ಕೃತಿಯ ಕರ್ತೃ

A) ಮ್ಯಾಥ್ಯೂ ಆರ್ನಾಲ್ಡ್ B) ಕೆ.ಬೂಚರ್

C) ಜಾರ್ಜ್ ಥಾಂಸನ್ D) ಲೆವಿಸ್ಟ್ರಾಸ್

115. 'ಸಂರಕ್ಷಣೆ' ಎಂಬ ಶಬ್ದಕ್ಕೆ ಹೆಚ್ಚು ಸೂಕ್ತವಾದ ಅರ್ಥ

A) ಕಾಪಾಡವಿಕೆ B) ಸಡಗರ

C) ಸಂಬಂಧ D) ಪೋಷಕ

116. ಇವರುಗಳಲ್ಲಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಕೊಡುಗೆ ನೀಡಿರುವವರನ್ನು ಗುರುತಿಸಿ.

1. ಯು.ಆರ್.ಅನಂತಮೂರ್ತಿ
2. ಮಾಸ್ತಿವೆಂಕಟೇಶ ಅಯ್ಯಂಗಾರ್
3. ಎಲ್.ಬಸವರಾಜು
4. ಪ್ರಭುಶಂಕರ

A) 2 ಮತ್ತು 3 B) 3 ಮತ್ತು 1

C) 1 ಮತ್ತು 4 D) 1 ಮತ್ತು 2

117. ಇವುಗಳಲ್ಲಿ ಡಿವಿಜಿಯವರ ಕೃತಿ ಯಾವುದು?

A) ಜೀವನ ಸೌಂದರ್ಯ ಮತ್ತು ಸಾಹಿತ್ಯ

B) ಎಡೆಗಳು ಹೇಳುವ ಕಂನಾಡ ಕತೆ

C) ಸಂಸ್ಕೃತಿ ಉಪಸಂಸ್ಕೃತಿ

D) ಸಾಹಿತ್ಯ ಸಂಕಥನ

118. ಸಾಹಿತ್ಯ ಕ್ಷೇತ್ರದಲ್ಲಿ ಮೊತ್ತಮೊದಲಿಗೆ 'ರಾಚನಿಕ ವಿಶ್ಲೇಷಣೆ'ಯನ್ನು ಬಳಸಿದವರು ಯಾರು?

A) ಎ.ಜೆ.ಗ್ರೇಮಸ್ B) ವ್ಲಾಡಿಮೀರ್ ಪ್ರಾಪ್

C) ತಾದರೋವ್ D) ಯಾಕಬ್‌ಸನ್

119. 'ಪ್ರಕ್ಷೇಪ' ಎಂದರೆ:

A) ಹೊಸದಾಗಿ ಸೇರಿಸುವುದು

B) ಇರುವುದನ್ನು ಬಿಡುವುದು

C) ಇರುವುದನ್ನು ಬದಲಾಯಿಸುವುದು

D) ಸಂಕ್ಷೇಪಗೊಳಿಸುವುದು

120. " ಕಲ್ಚರ್, ಎ ಕ್ರಿಟಿಕಲ್ ರಿವ್ಯೂ ಆಫ್ ಕಾನ್ಸೆಪ್ಟ್ಸ್ ಅಂಡ್ ಡೆಫಿನಿಷನ್ಸ್"ಕೃತಿಯ ಲೇಖಕರು

A) ಎ.ಎಲ್.ಕ್ರೋಬರ್ ಮತ್ತು ಕ್ಲೈಡ್ ಕ್ಲುಕ್ಹೊನ್

B) ಕೆ.ಎಫ್.ವಾನ್ ಇರ್ವಿಂಗ್ ಮತ್ತು ಜಾನ್ ಡ್ಯುಯಿ

C) ಜೆ.ಸಿ.ಅಡೆಲಿಂಗ್ ಮತ್ತು ಜೇಗರ್

D) ಇ.ಬಿ.ಟೈಲರ್ ಮತ್ತು ಹಾಬ್ಸ್

..................................